# ಪರ್ಯಾಯ ಶೈಕ್ಷಣಿಕ ಯೋಜನೆ–2021-22

**9ನೇ ತರಗತಿ** **ಆಗಸ್ಟ್ ಮಾಹೆ** **ದ್ವಿತೀಯ ಭಾಷೆ ಕನ್ನಡ**

| ಕ್ರ.ಸಂ | ತಿಂಗಳು ಮತ್ತು ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಆಗಸ್ಟ್<br><br>ಮೊದಲನೆಯ ವಾರ | ಗದ್ಯ : ಅವರೇ ರಾಜರತ್ನಂ!<br>* ಪರಿಚಿತ ಸನ್ನಿವೇಶ, ಘಟನೆಯನ್ನು ಸಮರ್ಪಕವಾಗಿ ವಿವರಿಸುವುದು<br><br>* ಕೊಟ್ಟಿರುವ ವಿಷಯವನ್ನು ಓದಿ ಅರ್ಥೈಸಿಕೊಂಡು ಸರಳ ವಾಕ್ಯಗಳಲ್ಲಿ ವಿವರಿಸುವರು.<br><br>* ಪಾಠವನ್ನು ಓದಿ ಅರ್ಥೈಸಿಕೊಂಡು ಭಿಕ್ಷುಕರ ಬಗ್ಗೆ ಕುವೆಂಪು ಅವರ ಅಭಿಪ್ರಾಯವನ್ನು ತಿಳಿಯುವರು. | ● ವಿದ್ಯಾರ್ಥಿಯು ತನ್ನ ಜೀವನದಲ್ಲಿ ನಡೆದ ಯಾವುದಾದರೂ ಸ್ವಾರಸ್ಯಕರ ಘಟನೆಯನ್ನು ಹೇಳುವಂತೆ ಪ್ರೇರೇಪಿಸುವುದು.<br>● ಕವಿಯ ಸ್ಥಳ, ಕಾಲ, ಕೃತಿಗೆ ಸಂಬಂಧಿಸಿದ ಪದಗಳನ್ನು ನೀಡಿ, ಅವುಗಳ ಸಹಾಯದಿಂದ ವಾಕ್ಯರೂಪದಲ್ಲಿ ಕವಿ ಪರಿಚಯವನ್ನು ಬರೆದು ಬರೆದು ಹೇಳುವಂತೆ ಸೂಚಿಸುವುದು.<br>ಅಭ್ಯಾಸ ಹಾಳೆ - 1<br>● ಪಾಠವನ್ನು ಓದಿ ಸಾರಾಂಶವನ್ನು ತನ್ನ ಮಾತುಗಳಲ್ಲಿ ವಿವರಿಸಲು ಸೂಚಿಸುವುದು. | ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ. |
| 2 | ಆಗಸ್ಟ್<br><br>ಎರಡನೆಯ ವಾರ | * ವಿವಿಧ ವ್ಯಕ್ತಿಗಳ ವೇಷಭೂಷಣಗಳನ್ನು ವಿವರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವರು. | ● ಶಿವ, ಕೃಷಿಕ, ಕೃಷ್ಣ, ಭಿಕ್ಷುಕ, ಯಕ್ಷಗಾನ ಪಾತ್ರ - ಈ ರೀತಿ ವಿವಿಧ ವ್ಯಕ್ತಿಗಳ ವೇಷಭೂಷಣವನ್ನು ಕುರಿತು ತನ್ನ ಮಾತುಗಳಲ್ಲಿ ವಿವರಿಸುವ ಚಟುವಟಿಕೆ.<br>● ಪಾಠದಲ್ಲಿರುವ ಹೊಸ ಪದಗಳಿಗೆ ಅರ್ಥವನ್ನು ತಿಳಿದು ಸ್ವಂತ ವಾಕ್ಯಗಳಲ್ಲಿ ವಿವರಿಸುವರು.<br>● ಅಭ್ಯಾಸದಲ್ಲಿರುವ ಸರಳ ಪ್ರಶ್ನೆಗಳಿಗೆ ತನ್ನದೇ ವಾಕ್ಯಗಳಲ್ಲಿ | |

| | | | | |
|---|---|---|---|---|
| | | * ವಾಕ್ಯರಚನಾ ಸಾಮರ್ಥ್ಯವನ್ನು ಬೆಳೆಸುವುದು.<br><br>* ಭಾಷಾಂಶ ಮತ್ತು ವ್ಯಾಕರಣಾಂಶಗಳನ್ನು ಅರಿಯುವರು. | ಉತ್ತರಿಸುವಂತೆ ಸೂಚಿಸುವುದು.<br>● ಸಂಧಿಪದಗಳನ್ನು ಬಿಡಿಸಿ ಬರೆಯಲು ಮಾರ್ಗದರ್ಶಿಸುವುದು. ಹಾಗೆಯೇ ಪದಗಳನ್ನು ಕೂಡಿಸಿ ಬರೆಸುವುದು.<br>● ಪದಗಳಲ್ಲಿರುವ ವಿಭಕ್ತಿ ಮತ್ತು ಪ್ರತ್ಯಯವನ್ನು ಹೆಸರಿಸುವುದು.<br>ಅಭ್ಯಾಸ ಹಾಳೆ – 2 | ಘಟಕ ಪರೀಕ್ಷೆ |
| 3 | ಆಗಸ್ಟ್<br><br>ಮೂರನೆಯ ವಾರ | ಪದ್ಯ : ಬೆಳಗು ಜಾವ<br>* ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸಿ ತಮ್ಮ ಮಾತುಗಳಲ್ಲಿ ವಿವರಿಸುವರು.<br><br>* ಪದ್ಯಭಾಗಕ್ಕೆ ರಾಗಸಂಯೋಜನೆಯನ್ನು ಮಾಡಿ ಸ್ವರಭಾರದೊಂದಿಗೆ ರಾಗವಾಗಿ ಹಾಡುವರು. | ● ಸೂರ್ಯೋದಯ, ಜಲಪಾತ, ಮಳೆ, ಸೂರ್ಯಾಸ್ತ, ಉದ್ಯಾನವನ – ಈ ರೀತಿ ಪ್ರಕೃತಿ ಸೌಂದರ್ಯವನ್ನು ಕುರಿತಾದ ವಿಷಯಗಳನ್ನು ಕುರಿತು ಆಶುಭಾಷಣ ಮಾಡಿಸುವುದು.<br>● ನಿಸರ್ಗ ವರ್ಣನೆಯನ್ನೊಳಗೊಂಡ ಪದ್ಯಭಾಗದ ಧ್ವನಿಸುರುಳಿಯನ್ನು ಕೇಳಿಸುವುದು.<br>● ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು.<br>● ಕನ್ನಡದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಾಹಿತಿ ಸಂಗ್ರಹ (ಯೋಜನಾ ಕಾರ್ಯ) | |

| | | | | |
|---|---|---|---|---|
| | | * ಕನ್ನಡ ಸಾಹಿತ್ಯದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿಗಳ ಪರಿಚಯ. | | ಜ್ಞಾನಪೀಠ ಪ್ರಶಸ್ತಿ **ಪುರಸ್ಕೃತ** ಒಬ್ಬರು ಕವಿಯ ಸಂಕ್ಷಿಪ್ತ ಪರಿಚಯ. |
| 4 | ಆಗಸ್ಟ್<br><br>ನಾಲ್ಕನೆಯ ವಾರ | * ಪದ್ಯಭಾಗವನ್ನು ಕಂಠಪಾಠ ಮಾಡಿ ಹಾಡುವರು.<br>* ಪದ್ಯದ ಭಾವಾರ್ಥವನ್ನು ತಮ್ಮ ಮಾತುಗಳಲ್ಲಿ ಅಭಿವ್ಯಕ್ತಿಸುವರು.<br><br>* ಭಾಷಾಂಶ ಮತ್ತು ವ್ಯಾಕರಣಾಂಶಗಳನ್ನು ಅರಿಯುವರು. | ● ಕಂಠಪಾಠಕ್ಕೆ ನಿಗದಿಯಾಗಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ ಒಪ್ಪಿಸುವುದು.<br>● ಪದ್ಯಭಾಗದ ಭಾವಾರ್ಥವನ್ನು ಕೇಳಿ ಅರ್ಥೈಸಿಕೊಂಡು ತಮ್ಮ ಮಾತಿನಲ್ಲಿ ವಿವರಿಸುವರು.<br><br>● ತತ್ಸಮ ತದ್ಭವಗಳನ್ನು ಪರಿಚಯಿಸುವುದು.<br>● ಲಿಂಗ ಮತ್ತು ವಚನಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವರು.<br>ಅಭ್ಯಾಸ ಹಾಳೆ – 3 | ಕಂಠಪಾಠ ಮಾಡಿರುವ ಪದ್ಯವನ್ನು ತಪ್ಪಿಲ್ಲದೆ ಬರೆಯಿರಿ.<br><br>ಪದ್ಯದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. |

**ಅಭ್ಯಾಸ ಹಾಳೆ : 1 ಕವಿಗೆ ಸಂಬಂಧಿಸಿದಂತೆ ನೀಡಿರುವ ಮಾಹಿತಿಯನ್ನು ಬಳಸಿಕೊಂಡು ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ.**

ಮಾದರಿ : ಜಿ.ಎಸ್ ಶಿವರುದ್ರಪ್ಪ

| | | | |
|---|---|---|---|
| 1926 | ಶಿವಮೊಗ್ಗ ಜಿಲ್ಲೆ | ಈಸೂರು ಗ್ರಾಮ | ಸೌಂದರ್ಯ ಸಮೀಕ್ಷೆ |
| ದೀಪದ ಹೆಜ್ಜೆ | ಸಾಮಗಾನ | ಅನಾವರಣ | ಚೆಲುವು-ಒಲವು |
| ತೆರೆದ ದಾರಿ | ಗೋಡೆ | ಪಂಪ ಪ್ರಶಸ್ತಿ | ನೃಪತುಂಗ ಪ್ರಶಸ್ತಿ |
| ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | | ರಾಷ್ಟ್ರಕವಿ ಪುರಸ್ಕಾರ | |

ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಜಿ.ಎಸ್ ಶಿವರುದ್ರಪ್ಪನವರು 1926ರಲ್ಲಿ ಶಿವಮೊಗ್ಗ ಜಿಲ್ಲೆಯ, ಶಿಕಾರಿಪುರ ತಾಲ್ಲೂಕಿನ ಈಸೂರು ಎಂಬ ಗ್ರಾಮದಲ್ಲಿ ಜನಿಸಿದರು. ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೆಯಾದ ವಿಶೇಷ ಕೊಡುಗೆಯನ್ನು ನೀಡಿರುವ ಶ್ರೀಯುತರು ಸೌಂದರ್ಯ ಸಮೀಕ್ಷೆ, ದೀಪದ ಹೆಜ್ಜೆ, ಸಾಮಗಾನ, ಅನಾವರಣ, ಚೆಲುವು-ಒಲವು, ತೆರೆದ ದಾರಿ, ಗೋಡೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರು ಸಾಹಿತ್ಯ ಲೋಕಕ್ಕೆ ನೀಡಿದ ಸೇವೆಗಾಗಿ ಪಂಪಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಗಳಿಸಿದ್ದಾರೆ. ಹಾಗೆಯೇ ಇವರು ರಾಷ್ಟ್ರಕವಿ ಪುರಸ್ಕಾರವನ್ನೂ ಸಹ ಗಳಿಸಿದ್ದಾರೆ.

ಪೂರ್ಣಚಂದ್ರ ತೇಜಸ್ವಿ

| | | | |
|---|---|---|---|
| 1938 | ಶಿವಮೊಗ್ಗ ಜಿಲ್ಲೆ | ಕುಪ್ಪಳ್ಳಿ ಗ್ರಾಮ | ಚಿದಂಬರ ರಹಸ್ಯ |
| ಕರ್ವಾಲೋ | ಜುಗಾರಿ ಕ್ರಾಸ್ | ಅಬಚೂರಿನ ಪೋಸ್ಟಾಫೀಸು | ಜುಗಾರಿ ಕ್ರಾಸ್ |
| ಅಣ್ಣನ ನೆನಪು | ಹುಲಿಯೂರಿನ ಸರಹದ್ದು | ರಾಜ್ಯೋತ್ಸವ ಪ್ರಶಸ್ತಿ | ಪಂಪ ಪ್ರಶಸ್ತಿ |
| ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | |

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

## ಅಭ್ಯಾಸ ಹಾಳೆ : 2

ಈ ಕೆಳಗಿನ ಪದಗಳಿಗೆ ವಿಭಕ್ತಿ ಹಾಗೂ ಪ್ರತ್ಯಯವನ್ನು ಬರೆಯಿರಿ

ಮಾದರಿ : ಭಿಕ್ಷುಕರನ್ನು : ದ್ವಿತೀಯ ವಿಭಕ್ತಿ - ಅನ್ನು

| ಕ್ರ.ಸಂ | ಪದ | ವಿಭಕ್ತಿ | ಪ್ರತ್ಯಯ | | ಕ್ರ.ಸಂ | ಪದ | ವಿಭಕ್ತಿ | ಪ್ರತ್ಯಯ |
|---|---|---|---|---|---|---|---|---|
| 1 | ಆಶ್ರಮದಲ್ಲಿ | | | | 6 | ಬೋಧನೆಯನ್ನು | | |
| 2 | ಗೇಟನ್ನು | | | | 7 | ಬಣ್ಣದ | | |
| 3 | ಮನೆಗೆ | | | | 8 | ಹೆಳವನು | | |
| 4 | ಭಿಕ್ಷುಕರ | | | | 9 | ಕಲ್ಲಿನಿಂದ | | |
| 5 | ಲೇಖನಿಯಿಂದ | | | | 10 | ಮನೆಯಲ್ಲಿ | | |

ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ

ಮಾದರಿ : ಆಕಸ್ಮಿಕವಾಗಿ : ಆಕಸ್ಮಿಕ + ಆಗಿ

1. ಏನಾದರು : ..................................
2. ಬೋಧನೆಯನ್ನು : ..................................
3. ಚೀಲವಿತ್ತು : ....................................
4. ನಾವೆಲ್ಲರು : .....................................
5. ಮನೆಯೊಳಗೆ : ....................................

ಈ ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ

ಮಾದರಿ : ಅದು + ಅನ್ನು = ಅದನ್ನು

1. ಅವರು + ಅನ್ನು = ............................
2. ಹೆಚ್ಚು + ಎಂದರೆ = ............................
3. ಆಶ್ರಮದಲ್ಲಿ + ಇದ್ದಾಗ = .........................
4. ಹೊಸ + ಕನ್ನಡ = ............................
5. ಸಿದ್ಧ + ಈಶ್ವರ = ............................

## ಅಭ್ಯಾಸ ಹಾಳೆ : 3

ಕೆಳಗಿನ ಪದಗಳಿಗೆ ಸೂಕ್ತವಾದ ವಿರುದ್ಧಾರ್ಥಕ ಪದ ಬರೆಯಿರಿ

ಮಾದರಿ : ಏಳು × ಬೀಳು

| | ವಿರುದ್ಧಾರ್ಥಕ ಪದ | | | ವಿರುದ್ಧಾರ್ಥಕ ಪದ |
|---|---|---|---|---|
| ಬೆಳಕು | | | ಕರುಣೆ | |
| ಸಹಕಾರ | | | ಸಾಧಾರಣ | |
| ಕಷ್ಟ | | | ಹಿರಿಯ | |
| ಪ್ರತ್ಯಕ್ಷ | | | ಸಂಕೋಚ | |
| ಆಶ್ರಯ | | | ಸೋಲು | |

ಕೆಳಗಿನ ಕೆಳಗಿನ ತತ್ಸಮ-ತದ್ಭವ ಪದಗಳನ್ನು ಹೊಂದಿಸಿ ಬರೆಯಿರಿ

| ಕ್ರ.ಸಂ | ತತ್ಸಮ | ತದ್ಭವ | | ಕ್ರ.ಸಂ | ಉತ್ತರ |
|---|---|---|---|---|---|
| 1 | ವರ್ಣ | ಚಣ | | 1 | ವರ್ಣ – ಬಣ್ಣ |
| 2 | ಪ್ರಾಯ | ರಾಯ | | 2 | |
| 3 | ಕ್ಷಣ | ಕಬ್ಬ | | 3 | |
| 4 | ಆಶ್ರಯ | ಬಣ್ಣ | | 4 | |
| 5 | ಕವಿ | ಕಜ್ಜ | | 5 | |
| 6 | ಕಾರ್ಯ | ಮೊಗ | | 6 | |
| 7 | ಆಶ್ಚರ್ಯ | ಹರೆಯ | | 7 | |
| 8 | ಕಾವ್ಯ | ಕಬ್ಬಿಗ | | 8 | |
| 9 | ರಾಜ | ಅಚ್ಚರಿ | | 9 | |
| 10 | ಮುಖ | ಆಸರೆ | | 10 | |

ಈ ಕೆಳಗಿನ ಪದಗಳಿಗೆ ಅನ್ಯಲಿಂಗ ರೂಪವನ್ನು ಬರೆಯಿರಿ

ಮಾದರಿ : ರಾಜ – ರಾಣಿ

| | | | | |
|---|---|---|---|---|
| ಹುಡುಗ | | | ಯುವಕ | |
| ಕವಿ | | | ಪುರುಷ | |
| ಸಚಿವ | | | ಹೂವಾಡಿಗ | |

ಘಟಕ ಪರೀಕ್ಷೆ

ಘಟಕ : ಅವರೇ ರಾಜರತ್ನಂ!

ಈ ಕೆಳಗಿನ ಪದಗಳಿಗೆ ತಲಾ ಒಂದು ವಾಕ್ಯದಲ್ಲಿ ಉತ್ತರಿಸಿ 4×1=4

1. ಕುವೆಂಪು ಅವರು ಭಿಕ್ಷೆ ಹಾಕುವುದನ್ನು ಏಕೆ ವಿರೋಧಿಸುತ್ತಿದ್ದರು?
2. ಕುವೆಂಪು ಅವರ ಮಕ್ಕಳು ಭಿಕ್ಷುಕರೆಂದು ಭಾವಿಸಿದ ಕವಿಯ ಹೆಸರೇನು?
3. ರಾಜರತ್ನಂ ಅವರು ಕುವೆಂಪು ಅವರ ಬಳಿ ಏನೆಂದು ತಮಾಷೆ ಮಾಡಿದರು?
4. ಪೂರ್ಣಚಂದ್ರ ತೇಜಸ್ವಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ತಂದೊಕೊಟ್ಟ ಕೃತಿ ಯಾವುದು?

ಈ ಕೆಳಗಿನ ಪ್ರಶ್ನೆಗಳಿಗೆ ತಲಾ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ 2×2=4

5. ಕುವೆಂಪು ಅವರಿಗೆ ಭಿಕ್ಷುಕರ ಬಗ್ಗೆ ಇದ್ದ ಅಭಿಪ್ರಾಯವೇನು?
6. ರಾಜರತ್ನಂ ಅವರ ವೇಷಭೂಷಣಗಳು ಹೇಗಿದ್ದವು?

ಈ ಕೆಳಗಿನ ಪ್ರಶ್ನೆಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ 1×3=3

7. ಏನ್ರಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?

ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ 4×1=4

8. ಕರುಣೆ ( ವಿರುದ್ಧ ರೂಪವನ್ನು ಬರೆಯಿರಿ)
9. ಮಗು (ಬಹುವಚನ ರೂಪವನ್ನು ಬರೆಯಿರಿ)
10. ಕಾಲೇಜಿಗೆ (ಈ ಪದದಲ್ಲಿರುವ ವಿಭಕ್ತಿಯನ್ನು ಹೆಸರಿಸಿ)
11. ಆಕಸ್ಮಿಕ ( ಸ್ವಂತ ವಾಕ್ಯದಲ್ಲಿ ಬರೆಯಿರಿ)

## ಘಟಕ ಪರೀಕ್ಷೆ

## ಘಟಕ : ಬೆಳಗು ಜಾವ

ಕೆಳಗಿನ ಪ್ರಶ್ನೆಗಳಿಗೆ ತಲಾ ಒಂದು ವಾಕ್ಯದಲ್ಲಿ ಉತ್ತರಿಸಿ 4×1=4

1. ಜೇನ್ನೊಣದ ಎದೆಗೆ ಹೂಬಾಣ ಹೂಡಿದವರು ಯಾರು?
2. ಕವಿಗೆ ಜಗವು ಸವಿಯಾಗಿ ಯಾವಾಗ ಕಂಡಿತು?
3. ನಕ್ಷತ್ರ ಜಾರಿ ತಮವೆಲ್ಲ ಸೋರಿದುದು ಯಾವಾಗ?
4. ದ.ರಾ ಬೇಂದ್ರೆ ಅವರ ಕಾವ್ಯನಾಮವೇನು?

ಈ ಕೆಳಗಿನ ಪ್ರಶ್ನೆಗೆ ತಲಾ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ 2×1=2

5. ಜೀವನದ ಸವಿಯನ್ನು ಸವಿಯಲು ತಡ ಮಾಡಬಾರದು. ಏಕೆ?

ಈ ಕೆಳಗಿನ ಪ್ರಶ್ನೆಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ. 1×3=3

6. "ಜೀವನದ ನದಿಗೆ ಸೆಳವಿಹುದು"

ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ 1×4=4

7. ನಿಶೆಯಿಳಿದ ………………………………………………..

………………………………………………………

………………………………………………………

………………………………………………………..

ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

8. ಕವಿ : ಕಬ್ಬಿಗ : : ವರ್ಣ :? $4\times\frac{1}{2} = 2$
9. ಯುವಕ : ಯುವತಿ : ಸಚಿವ : ?
10. ಎದೆಗೆ : ಚತುರ್ಥಿ : : ಜೀವನದಲ್ಲಿ : ?
11. ಸೋತಿರಲು : ಲೋಪಸಂಧಿ : : ಜಗವೆಲ್ಲ : ?